



ಪ್ರೊ. ಸ್ಟೀಫನ್ ಹಾಕಿಂಗ್ ಭೌತಿಕ ಜಗತ್ತಿನಿಂದ ನಿರ್ಗಮಿಸಿದ್ದಾರೆ. ಸ್ನಾಯು ನಿಷ್ಕ್ರಿಯವಾದರೂ, ತಂತ್ರಜ್ಞಾನದ ಸಹಾಯದಿಂದ ತಮ್ಮ ಸಂಶೋಧನೆ ಮುಂದುವರಿಸಿದ ಹಾಕಿಂಗ್, ನಿಜಕ್ಕೂ ವಿಶ್ವ ಕಂಡ ವಿಸ್ಮಯದ ವಿಜ್ಞಾನಿ.

■ ಎಂ.ಅಬ್ದುಲ್ ರೆಹಮಾನ್ ಪಾಷ

# ವಿಶ್ವವಿಜ್ಞಾನದ ವಿಸ್ಮಯ

ಹದಿನೆಂಟು – ಇಪ್ಪತ್ತರ ಯುವಕ. ಜಾಣ. ಆದರೆ ತರಗತಿಯಲ್ಲಿ ಮಾತ್ರ ಮೂರನೇ ಸ್ಥಾನದಲ್ಲಿ, ಕೊನೆಯಿಂದ. ತರಗತಿಗಿಂತ ಹೊರಗಡೆಯೇ ಬಿಡುವಿಲ್ಲದ ಕೀಟಲೆ. ತುಂಟತನವೇ ಮೈತ್ತಿದಂತಿದ್ದ ಈ ಯುವಕನಲ್ಲಿ ವಿಚಿತ್ರ ಲಕ್ಷಣಗಳು ಕಾಣಿಸಿಕೊಳ್ಳತೊಡಗಿದವು. ಓಡಾಡುವಾಗ ಇದ್ದಕ್ಕಿದ್ದಂತೆ ಎಡವಿದ ಹಾಗೆ ಬಿದ್ದು ಬಿಡುತ್ತಿದ್ದ. ಮಾತು ಅಸ್ಪಷ್ಟವಾಗುತ್ತಿತ್ತು. ಕೊನೆಗೆ ಇದು ಉಲ್ಬಣವಾದಾಗ, ಆಸ್ಪತ್ರೆ ಸೇರಿದ. ಹಲವಾರು ಸುದೀರ್ಘ ಪರೀಕ್ಷೆಗಳನ್ನು ನಡೆಸಿ ಕೊನೆಗೆ ಡಾಕ್ಟರರು ಆಘಾತಕಾರಿ ಸುದ್ದಿಯನ್ನು ಪ್ರಕಟಿಸಿದರು. ಈತನಿಗೆ ಅಮಿಯೋಟ್ರೋಫಿಕ್ ಲೇಟರಲ್ ಸ್ಕ್ಲೆರೋಸಿಸ್(ಎಎಸ್ಎಲ್) ಎಂಬ ವಿಲಕ್ಷಣ ಕಾಯಿಲೆ ಆಗಿದೆ ಎಂದು!

ಇದರಿಂದಾಗಿ ಈತನ ಸ್ನಾಯುಗಳನ್ನು ನಿಯಂತ್ರಿಸುತ್ತಿದ್ದ ನರವ್ಯೂಹಗಳು ಒಂದೊಂದಾಗಿ ನಿಷ್ಕ್ರಿಯವಾಗ ತೊಡಗಿದ್ದವು. ಈ ಭಯಾನಕ ಕಾಯಿಲೆಯ ಇತಿಹಾಸ ಬಲ್ಲ ಡಾಕ್ಟರರು 'ಎರಡು, ಹೆಚ್ಚೆಂದರೆ ಮೂರು ವರ್ಷ ಬದುಕಬಹುದು' ಎಂದು ವರದಿ ನೀಡಿದರು. ಆ ಹೊತ್ತಿಗೆ ಈತನಿಗೆ ಕೇವಲ 21 ವರ್ಷ. ಆದರೆ ಈತ ಬದುಕಿದ– ನಾಲ್ಕಾರು ವರ್ಷವಲ್ಲ, ಭರ್ತಿ 76 ವರ್ಷ. ಇದು ವೈದ್ಯಕೀಯ ಜಗತ್ತಿನ ಪವಾಡ ಎಂದೇ ಹೇಳಬೇಕು. ಇವರೇ ಬುಧವಾರ, 2018ರ ಮಾರ್ಚ್ 14ರಂದು ನಿಧನರಾದ, ಜಗದ್ವಿಖ್ಯಾತ ವಿಶ್ವವಿಜ್ಞಾನಿ, ಗಣಿತಜ್ಞ, ಪ್ರೊ. ಸ್ಟೀಫನ್ ಹಾಕಿಂಗ್.

ಸ್ಟೀಫನ್ ಹಾಕಿಂಗ್ ಬರೆದಿರುವ ಹಲವಾರು ಪುಸ್ತಕಗಳಲ್ಲಿ ಒಂದು ಅವರ ಆತ್ಮಚರಿತ್ರೆ 'ಸ್ಟೀಫನ್ ಹಾಕಿಂಗ್: ಮೈ ಬ್ರೀಫ್ ಹಿಸ್ಟರಿ.' ಎಎಲ್ಎಸ್ ಆಗಿರುವ ಇನ್ಯಾರಾದರೂ ಆಗಿದ್ದರೆ ನಿಜವಾಗಿಯೂ ಆತ್ಮಕತೆ ಬ್ರೀಫ್ ಆಗಬಹುದಾಗಿತ್ತೇನೋ. ಆದರೆ ಈ ಹಠಮಾರಿ ವ್ಯಕ್ತಿ ಏನಾದರೂ ಮಹತ್ವದ್ದನ್ನು ಮಾಡುವ ಅದಮ್ಯ ಬಯಕೆಯಿಂದ ಮೃತ್ಯುವನ್ನು ಮುಂದಕ್ಕೆ ಮುಂದಕ್ಕೆ ಹಾಕುತ್ತಾ ಹೋದರು. ಅವರೇ ಹೇಳಿದ್ದರು– 'ಈ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಳ್ಳುವ ಮುಂಚೆ ನನಗೆ ಜೀವನ ಬೋರ್ ಆಗುತ್ತಿತ್ತು. ಮಾಡಲು ಮಹತ್ವವಾದ ಏನೂ ನನಗೆ ಕಾಣುತ್ತಿರಲಿಲ್ಲ. ಆದರೆ ನಾನು ಕನಸು ಕಂಡಿದ್ದ ಪಿಎಚ್‌ಡಿಯನ್ನು ಪಡೆಯುವ ಮುನ್ನವೇ ನಾನು ಸಾಯುತ್ತೇನೆ ಎಂಬುದು ಅರಿವಿಗೆ ಬಂದಾಗ ನನಗೆ ಜ್ಞಾನದ ಹಸಿವು ಹೆಚ್ಚಾಯಿತು. ಸಾಯುವ ಮುಂಚೆ ಇದನ್ನು ಮಾಡಬೇಕು ಎಂಬ ಆಸೆ ಹೆಚ್ಚಿತು. ಎಲ್ಲರಿಗೂ ಬದುಕಲು ಇರುವ ಸಮಯ ಸೀಮಿತವೇ, ಆದರೆ ಅಷ್ಟು ಸಮಯ ಕೇವಲ ಬದುಕುವುದಲ್ಲ, ಬದುಕಿದಷ್ಟು ಕಾಲ ನಾವು ಏನನ್ನು ಸಾಧಿಸಿದ್ದೇವೆ ಎಂಬುದು ಬಹಳ ಮುಖ್ಯ.'

## ಸ್ನಾಯು ನಿಷ್ಕ್ರಿಯ, ಬುದ್ಧಿ ಚುರುಕು

1969ರ ಹೊತ್ತಿಗೆ ಪ್ರೊ.ಹಾಕಿಂಗ್ ಗಾಲಿಕುರ್ಚಿಯಲ್ಲಿ ಮುದುಡಿಕೊಳ್ಳಬೇಕಾಯಿತು. ದೇಹದ ಎಲ್ಲಾ ಅಂಗಾಂಗಳು ನಿಸ್ತೇಜವಾದುವು. ಅಲ್ಪಸ್ವಲ್ಪ ಆಡುತ್ತಿದ್ದ ಬಲಗೈಯ ಎರಡು ಬೆರಳುಗಳೂ